For More Job News Visit : www.kpscvaani.com

ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
ಪೋಸ್ಟ್ ಬಾಕ್ಸ್ ಸಂಖ್ಯೆ: 328, ಇಂಡಸ್ಟ್ರೀಯಲ್ ಏರಿಯಾ, ಹೈದ್ರಾಬಾದ್ ರೋಡ್,
ರಾಯಚೂರು–584 102
ಇಮೇಲ್: rrukofrcr@gmail.com ವೆಬ್‌ಸೈಟ್: www.kofraichur.com

ಕ್ರ.ಸಂ: ಆರ್‌ಆರ್‌ಯು/ಆಡಳಿತ/ನೇಮಕಾತಿ/ 784/2022–23 ದಿನಾಂಕ: 18–03–2023.

ನೇಮಕಾತಿ ಪ್ರಕಟಣೆ

ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ರಾಯಚೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
01	ಟೆಕ್ನಿಕಲ್ ಆಫೀಸರ್	33450–62600	01
02	ಅಗ್ರಿಕಲ್ಚರ್ ಎಕ್ಸಟೆನಶನ್ ಆಫೀಸರ್	33450–62600	01
03	ಫೀಲ್ಡ್ ಆಫೀಸರ್	33450–62600	01
04	ಸೀಡ್ಸ್ ಆಫೀಸರ್	33450–62600	01
05	ಇನ್‌ಪುಟ್ಸ್ ಆಫೀಸರ್	33450–62600	01
06	ಕಮರ್ಶಿಯಲ್ ಆಫೀಸರ್	33450–62600	01
07	ಅಸಿಸ್ಟೆಂಟ್ ಅಡಮಿನಿಸ್ಟ್ರೇಟಿವ್ ಆಫೀಸರ್	23500–47550	01
08	ಅಸಿಸ್ಟೆಂಟ್ ಸ್ಟೋರ್ಸ್ ಆಫೀಸರ್	23500–47550	01
09	ಇಲೇಕ್ಟ್ರೀಷಿಯನ್–2	23500–47550	01
10	ಎಕ್ಸಿಕ್ಯೂಟಿವ್ (ಸೇಲ್ಸ್)	21400–42000	01
11	ಎಕ್ಸಿಕ್ಯೂಟಿವ್ (ಕಮರ್ಶಿಯಲ್)	21400–42000	01
12	ಎಕ್ಸಿಕ್ಯೂಟಿವ್ (ಫೈನಾನ್ಸ್)	21400–42000	01
13	ಕೆಮಿಸ್ಟ್–1	21400–42000	01
14	ಟೈಪಿಸ್ಟ್/ಡೇಟಾ ಎಂಟ್ರಿ ಅಸಿಸ್ಟೆಂಟ್	21400–42000	01
15	ಅಸಿಸ್ಟೆಂಟ್ (ಇಲೆಕ್ಟ್ರೀಕಲ್)	18600–32600	01
16	ಅಸಿಸ್ಟೆಂಟ್ (ಕಮರ್ಶಿಯಲ್)	18600–32600	01

ಅರ್ಜಿ ನಮೂನೆ, ವಯೋಮಿತಿ, ವಿದ್ಯಾರ್ಹತೆ, ಅರ್ಜಿ ಶುಲ್ಕ, ಆಯ್ಕೆ ವಿಧಾನ, ಸೂಚನೆ ಹಾಗೂ ನಿಬಂಧನೆ ಇತ್ಯಾದಿ ವಿವರಗಳು ಒಕ್ಕೂಟದ www.kofraichur.com ವೈಬ್‌ಸೈಟ್‌ನಲ್ಲಿ ಲಭ್ಯವಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಡೌನ್‌ಲೋಡ್ ಮಾಡಿ ಅಥವಾ ಬೆರಳಚ್ಚು ಮಾಡಿಸಿ ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಕೊನೆಯ ದಿನಾಂಕವಾದ 10–04–2023 ರ ಸಂಜೆ 5.30 ಗಂಟೆ ಒಳಗಾಗಿ ಸಲ್ಲಿಸಬಹುದು.

ವ್ಯವಸ್ಥಾಪಕ ನಿರ್ದೇಶಕರು
ಪ್ರಾ.ಎ.ಬೀ.ಬೆ.ಸ.ಸಂ.ಒ.ನಿ., ರಾಯಚೂರು ಪರವಾಗಿ

For More Job News Visit : www.kpscvaani.com

ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
ಪೋಸ್ಟ್ ಬಾಕ್ಸ್ ಸಂಖ್ಯೆ: 328, ಇಂಡಸ್ಟ್ರೀಯಲ್ ಏರಿಯಾ, ಹೈದ್ರಾಬಾದ್ ರೋಡ್,
ರಾಯಚೂರು-584 102
ಇಮೇಲ್: rrukofrcr@gmail.com ವೆಬ್‌ಸೈಟ್: www.kofraichur.com

ಕ್ರ.ಸಂ: ಆರ್‌ಆರ್‌ಯು/ಆಡಳಿತ/ನೇಮಕಾತಿ/ 784 /2022-23 ದಿನಾಂಕ: 18-03-2023

ನೇಮಕಾತಿ ಪ್ರಕಟಣೆ

ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ರಾಯಚೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಫ್‌ಲೈನ್ ಮೂಲಕ ಅಹ್ವಾನಿಸಲಾಗಿದೆ.

ಹುದ್ದೆಗಳ ವಿವರ ಮತ್ತು ವಿದ್ಯಾರ್ಹತೆ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಹುದ್ದೆಯ ಹೆಸರು	ಕನಿಷ್ಠ ವಿದ್ಯಾರ್ಹತೆ ಹಾಗೂ ಅನುಭವ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
01	ಟೆಕ್ನಿಕಲ್ ಆಫೀಸರ್	1. ಅಂಗೀಕೃತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ವಿಧ್ಯಾಸಂಸ್ಥೆಗಳಿಂದ ಬಿಇ ಮೆಕಾನಿಕಲ್ ಪದವಿ ಹೊಂದಿರಬೇಕು. 2. ಆಯಿಲ್ ಮಿಲ್‌ನಲ್ಲಿ ಕೆಲಸ ನಿರ್ವಹಿಸಿದ ಒಂದು ವರ್ಷದ ಅನುಭವ ಇರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	33450-62600	01
02	ಅಗ್ರಿಕಲ್ಚರ್ ಎಕ್ಸಟೆನಶನ್ ಆಫೀಸರ್	1. ಅಂಗೀಕೃತ ಕೃಷಿ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ (ಕೃಷಿ)/ಎಂಎಸ್‌ಸಿ (ಕೃಷಿ)ಯಲ್ಲಿ ಪದವಿ.. 2. ಕೃಷಿ ವಿಸ್ತರಣೆ, ಬೀಜೋತ್ಪಾದನೆ ಮತ್ತು ಮಾರಾಟ ಕ್ಷೇತ್ರದಲ್ಲಿ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು	33450-62600	01
03	ಫೀಲ್ಡ್ ಆಫೀಸರ್	1. ಅಂಗೀಕೃತ ಕೃಷಿ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ (ಕೃಷಿ)/ಎಂಎಸ್‌ಸಿ (ಕೃಷಿ)ಯಲ್ಲಿ ಪದವಿ.. 2. ಕ್ಷೇತ್ರ ವಿಕ್ಷಣೇ, ಬೀಜೋತ್ಪಾದನೆ ಮತ್ತು ಮಾರಾಟ ಕ್ಷೇತ್ರದಲ್ಲಿ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು	33450-62600	01
04	ಸೀಡ್ಸ್ ಆಫೀಸರ್	1. ಅಂಗೀಕೃತ ಕೃಷಿ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ (ಕೃಷಿ)/ಎಂಎಸ್‌ಸಿ (ಕೃಷಿ) ಯಲ್ಲಿ ಪದವಿ.. 2. ಬೀಜೋತ್ಪಾದನೆ ಮತ್ತು ಮಾರಾಟ ಕ್ಷೇತ್ರದಲ್ಲಿ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು	33450-62600	01

For More Job News Visit : www.kpscvaani.com

05	ಇನ್‌ಪುಟ್ಸ್ ಆಫೀಸರ್	1. ಅಂಗೀಕೃತ ಕೃಷಿ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ (ಕೃಷಿ)/ಎಂಎಸ್‌ಸಿ (ಕೃಷಿ) ಯಲ್ಲಿ ಪದವಿ.. 2. ಕೃಷಿ ಪರಿಕರಗಳು, ಬೀಜೋತ್ಪಾದನೆ ಮತ್ತು ಮಾರಾಟ ಕ್ಷೇತ್ರದಲ್ಲಿ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು	33450–62600	01
06	ಕಮರ್ಶಿಯಲ್ ಆಫೀಸರ್	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಎಂಕಾಂ ಪದವಿ/ಎಂಬಿಎ (ಮಾರ್ಕೇಟಿಂಗ್) ಪದವಿ. 2. ವಾಣಿಜ್ಯ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	33450–62600	01
07	ಅಸಿಸ್ಟೆಂಟ್ ಅಡಮಿನಿಸ್ಟ್ರೇಟಿವ್ ಆಫೀಸರ್	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಎ/ಬಿಕಾಂ ಪದವಿ. 2. ಆಡಳಿತಾತ್ಮಕ ಕ್ಷೇತ್ರ ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	23500–47550	01
08	ಅಸಿಸ್ಟೆಂಟ್ ಸ್ಟೋರ್ಸ್ ಆಫೀಸರ್	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಎ/ಬಿಕಾಂ ಪದವಿ. 2. ವಿವಿಧ ಸರಕುಗಳ ದಾಸ್ತಾನು ನಿರ್ವಹಣೆ ಹಾಗು ಮಾರುಕಟ್ಟೆ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	23500–47550	01
09	ಇಲೇಕ್ಟ್ರೀಷಿಯನ್–2	1. ಅಂಗೀಕೃತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಿಂದ ಡಿಪ್ಲೋಮೊ ಇನ್ ಇಲೆಕ್ಟ್ರೀಕಲ್/ಬಿ.ಇ. ಇನ್ ಇಲೆಕ್ಟ್ರೀಕಲ್ ನಲ್ಲಿ ವಿದ್ಯಾರ್ಹತೆ ಹೊಂದಿರಬೇಕು. 2. ಎಲೆಕ್ಟ್ರೀಕಲ್ ನಿರ್ವಹಣೆ ಮತ್ತು ಆಯಿಲ್ ಮಿಲ್/ಡಿಕಾರ್ಟಿಕೇಟರ್ ನಲ್ಲಿ ಕೆಲಸ ನಿರ್ವಹಿಸಿದ ಒಂದು ವರ್ಷದ ಅನುಭವ ಇರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	23500–47550	01
10	ಎಕ್ಸಿಕ್ಯೂಟಿವ್ (ಸೇಲ್ಸ್)	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಕಾಂ ಪದವಿ. 2. ಮಾರುಕಟ್ಟೆ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	21400–42000	01

For More Job News Visit : www.kpscvaani.com

ROCCS LTD., KOF ಪ್ರಾ RAICHUR

11	ಎಕ್ಸಿಕ್ಯೂಟಿವ್ (ಕಮರ್ಶಿಯಲ್)	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಕಾಂ ಪದವಿ. 2. ವಾಣಿಜ್ಯ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	21400–42000	01
12	ಎಕ್ಸಿಕ್ಯೂಟಿವ್ (ಫೈನಾನ್ಸ್)	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಕಾಂ ಪದವಿ. 2. ಹಣಕಾಸು ಮತ್ತು ಲೆಕ್ಕ (ಫೈನಾನ್ಸ್ & ಅಕೌಂಟ್ಸ್) ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	21400–42000	01
13	ಕೆಮಿಸ್ಟ್–1	1. ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ ಕೆಮಸ್ಟ್ರೀಯಲ್ಲಿ ಪದವಿ. 2. ಖಾದ್ಯತೈಲ ಗುಣಮಟ್ಟ ಪರೀಕ್ಷೆ ಕ್ಷೇತ್ರದಲ್ಲಿ ಕನಿಷ್ಟ ಒಂದು ವರ್ಷದ ಅನುಭವ ಹೊಂದಿರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	21400–42000	01
14	ಟೈಪಿಸ್ಟ್/ಡೇಟಾ ಎಂಟ್ರಿ ಅಸಿಸ್ಟೆಂಟ್	1. ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಪದವೀದರನಾಗಿರಬೇಕು. ಅಥವಾ ಮೂರು ವರ್ಷದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು. 2. ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲೀಕೇಷನ್ಸ್‌ನಲ್ಲಿ ಒಂದು ವರ್ಷದ ಕೋರ್ಸ್ ಸರ್ಟಿಫೀಕೆಟ್ ಹೊಂದಿರಬೇಕು. 3. ಕಂಪ್ಯೂಟರ್‌ನಲ್ಲಿ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಒಂದು ವರ್ಷದ ಅನುಭವ ಹೊಂದಿರಬೇಕು. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	21400–42000	01
15	ಅಸಿಸ್ಟೆಂಟ್ (ಇಲೆಕ್ಟ್ರೀಕಲ್)	1. ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಕಾಲೇಜಿನಿಂದ ಐಟಿಐ ಇಲೆಕ್ಟ್ರೀಕಲ್ ನಲ್ಲಿ ತೇರ್ಗಡೆ ಹೊಂದಿರಬೇಕು. 2. ಆಯಿಲ್ ಮಿಲ್/ಡಿಕಾರ್ಟಿಕೇಟರ್‌ನಲ್ಲಿ ಕೆಲಸ ನಿರ್ವಹಿಸಿದ ಮತು ಇಲೆಕ್ಟ್ರೀಕಲ್ ನಿರ್ವಹಣೆಯಲ್ಲಿ ಒಂದು ವರ್ಷದ ಅನುಭವ ಇರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	18600–32600	01
16	ಅಸಿಸ್ಟೆಂಟ್ (ಕಮರ್ಶಿಯಲ್)	1. ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಕಾಲೇಜಿನಿಂದ ಪಿಯುಸಿ ಅಥವಾ ತತ್ಸಮ ವಿಧ್ಯಾರ್ಹತೆ ಹೊಂದಿರಬೇಕು. 2. ವಾಣೀಜ್ಯ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿದ ಒಂದು ವರ್ಷದ ಅನುಭವ ಇರಬೇಕು. 3. ಕಂಪ್ಯೂಟರ್ ಜ್ಞಾನ ಅವಶ್ಯ. 4. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.	18600–32600	01

For More Job News Visit : www.kpscvaani.com

: ಸೂಚನೆಗಳು :

1. ಒಕ್ಕೂಟದಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ಇದರಲ್ಲಿ ನೀಡಿರುವ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಅಥವಾ ಬೆರಳಚ್ಚು ಮಾಡಿಸಿ ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ ಸಲ್ಲಿಸುವುದು.
2. ಅರ್ಜಿಯೊಂದಿಗೆ ಈ ಕೆಳಗೆ ಕಾಣಿಸಿದ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳಿಗೆ ಸ್ವಯಂ ಧೃಢೀಕರಿಸಲ್ಪಟ್ಟ ಪ್ರತಿಗಳನ್ನು ಲಗತ್ತಿಸುವುದು.
    1. ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲಾ ಸೆಮಿಸ್ಟರ್ / ವರ್ಷಗಳ ಅಂಕ ಪಟ್ಟಿಗಳು.
    2. ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಶಾಲೆಯ ವರ್ಗಾವಣೆ ಪತ್ರ ಅಥವಾ ಕ್ಯೂಮುಲೇಟಿವ್ ರೇಕಾರ್ಡ್ ಪ್ರಮಾಣ ಪತ್ರ.
    3. ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲೀಕೇಶನ್ಸ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣ ಪತ್ರಗಳು ಹಾಗೂ ಟ್ಯಾಲಿ ಕೋರ್ಸ್ ತೇರ್ಗಡೆ ಹೊಂದಿದ ಪ್ರಮಾಣ ಪತ್ರಗಳು.
    4. ಸೇವಾನುಭವ ಹೊಂದಿದ ಬಗ್ಗೆ ಪ್ರಮಾಣ ಪತ್ರ.
    5. ಮೀಸಲಾತಿ ಜಾತಿ ಪ್ರಮಾಣ ಪತ್ರ.
    6. ಅಂಗವಿಕಲ ಧೃಡಿಕರಣ ಪತ್ರ.
    7. ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕಾದಲ್ಲಿ ಸಂಬಂಧಿಸಿದ ಸಂಸ್ಥೆಯ ಮೂಲಕ ಇದರಲ್ಲಿ ನೀಡಿದ ನಮೂನೆಯಲ್ಲಿ ನಿರಾಪೇಕ್ಷಣಾ (No Objection Certificate) ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು:
    8. ಅರ್ಜಿಯೊಂದಿಗೆ ತನಗೆ ಸಂಬಂಧಿಕರಲ್ಲದ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನುಇದರಲ್ಲಿ ಒದಗಿಸಿದ ನಮೂನೆಯಲ್ಲಿ ಲಗತ್ತಿಸುವುದು.
    9. ಅರ್ಜಿಯೊಂದಿಗೆ ನಿಗದಿತ ಅರ್ಜಿ ಶುಲ್ಕದ ಮೂಲ (Original) ಡಿಡಿ/ಪೇ ಆರ್ಡರ್‌ನ್ನು ಲಗತ್ತಿಸುವುದು.
    10. ಪಾಸ್‌ಪೋರ್ಟ್ ಅಳತೆಯ ಒಂದು ಭಾವ ಚಿತ್ರವನ್ನು ಅರ್ಜಿಯ ಮೇಲ್ಭಾಗದ ನಿಗದಿತ ಸ್ಥಳದಲ್ಲಿ ಅಂಟಿಸಿ ಇನ್ನೆರಡು (02) ಭಾವ ಚಿತ್ರಗಳನ್ನು ಅರ್ಜಿಯ ಮೇಲ್ಭಾಗದಲ್ಲಿ ಲಗತ್ತಿಸುವುದು.
    11. ಲಕೋಟೆಯ ಮೇಲೆ ಹುದ್ದೆಯ ಹೆಸರನ್ನು ನಮೂದಿಸುವುದು.
    12. ಭರ್ತಿ ಮಾಡಿದ ಅರ್ಜಿಗಳನ್ನು ಅಭ್ಯರ್ಥಿಗಳು ಖುದ್ದು ಅಥವಾ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸಬಹುದಾಗಿದೆ.
    13. ಈ ಎಲ್ಲಾ ದಾಖಲೆಗಳನ್ನೊಳಗೊಂಡ ಸೀಲ್ಡ್ ಮಾಡಿದ ಲಕೋಟೆಯನ್ನು ದಿನಾಂಕ: 10.04.2023 ಸಂಜೆ 5.30 ರ ಒಳಗಾಗಿ ಈ ಕೆಳಗೆ ಕಾಣಿಸಿದವರಿಗೆ ತಲುಪುವಂತೆ ಕಳುಹಿಸತಕ್ಕದ್ದು.
    14. ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ ಮತ್ತು ವೇಳೆಯ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ
ಸಂಘಗಳ ಒಕ್ಕೂಟ ನಿಯಮಿತ
ಪೋಸ್ಟ್ ಬಾಕ್ಸ್ ಸಂಖ್ಯೆ: 328, ಇಂಡಸ್ಟ್ರೀಯಲ್ ಏರಿಯಾ,
ಹೈದ್ರಾಬಾದ್ ರೋಡ್, ರಾಯಚೂರು-584 102

For More Job News Visit : www.kpscvaani.com

I. ಸಾಮಾನ್ಯ ನಿಬಂಧನೆಗಳು

1. ಅಭ್ಯರ್ಥಿಗಳು ಭಾರತೀಯ ನಾಗರೀಕನಾಗಿರತಕ್ಕದ್ದು.

2. ಕನ್ನಡವನ್ನು ಓದುವುದರ ಜೊತೆ ಕನ್ನಡ ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.

3. ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಹಾಗೂ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

4. ಒಕ್ಕೂಟದ ಈ ನೇಮಕಾತಿ ಪ್ರಕಟಣೆಯಲ್ಲಿನ ಸೂಚನೆಗಳನ್ನು ಪೂರ್ಣವಾಗಿ ತಿಳಿಯದೇ ಅಭ್ಯರ್ಥಿಗಳು ತಪ್ಪೆಸಗಿದಲ್ಲಿ ಒಕ್ಕೂಟವು ಜವಾಬ್ದಾರರಾಗುವುದಿಲ್ಲ.

5. ಅರ್ಜಿಯಲ್ಲಿ ನಮೂದಿಸಿದ ಅಂಕಗಳು / ಇತರೇ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

6. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು, ಅಪೂರ್ಣವಾದ, ತಪ್ಪು ಮಾಹಿತಿ ಮತ್ತು ಅಸ್ಪಷ್ಟ ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು ಮತ್ತು ಅರ್ಜಿ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.

7. ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದು ಪಡಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ. ಇಂತಹ ಸಂದರ್ಭದಲ್ಲಿ ಅರ್ಜಿ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.

8. ಅಭ್ಯರ್ಥಿಗಳು ಆಯ್ಕೆಯಾದ ನಂತರ ಸಲ್ಲಿಸಿರುವ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ/ವಿಶ್ವವಿದ್ಯಾನಿಲಯಗಳಿಂದ ಧೃಡೀಕರಿಸಿಕೊಂಡು ನೇಮಕಾತಿ ಆದೇಶ ಹೊರಡಿಸುವ ಹಕ್ಕನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

9. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಒಕ್ಕೂಟವು ನಿಗದಿಪಡಿಸಿದಂತೆ ಪರೀಕ್ಷಾವಧಿ ಇರುತ್ತದೆ. ಅವಶ್ಯವಿದ್ದಲ್ಲಿ ಪರೀಕ್ಷಾವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

10. ಆಯ್ಕೆಯಾದ ಅಭ್ಯರ್ಥಿಗಳು ಒಕ್ಕೂಟವು ನಿಗದಿಪಡಿಸಿದಂತೆ ಒಪ್ಪಂದವನ್ನು ಮತ್ತು ಭದ್ರತೆಯನ್ನು ನೀಡಬೇಕಾಗುತ್ತದೆ.

11. ಆಯ್ಕೆಯಾದ ಆಭ್ಯರ್ಥಿಗಳು ಒಕ್ಕೂಟದ ಕಾರ್ಯವ್ಯಾಪ್ತಿ ಮತ್ತು ಕರ್ನಾಟಕ ರಾಜ್ಯ ಅಥವಾ ಹೊರರಾಜ್ಯದ ಹೊರಗು ವರ್ಗಾವಣೆ ಮಾಡಲು ಅವಕಾಶ ಇರುತ್ತದೆ.

12. ಒಕ್ಕೂಟಕ್ಕೆ ನೇಮಕಗೊಂಡ ಅಭ್ಯರ್ಥಿಗಳು ಒಕ್ಕೂಟದ ಸೇವಾ ನಿಯಮಗಳ ರೀತ್ಯಾ ಕಾರ್ಯನಿರ್ವಹಿಸಬೇಕಾಗುವುದು.

13. ಒಕ್ಕೂಟವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ.

14. ನೇಮಕಾತಿ ಪ್ರಕ್ರಿಯೆ ಮುಗಿಯುವ ವರೆಗೂ ಅವಶ್ಯವಿದ್ದಲ್ಲಿ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ವಿಳಾಸ, ಮೊಬೈಲ್ ಮತ್ತು ಇ-ಮೇಲ್ ಐಡಿಗಳ ಮೂಲಕ ಸಂಪರ್ಕಿಸಲಾಗುವುದು.

15. ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ ವಿವಿಧ ವರ್ಗದ ಒಟ್ಟು ಹುದ್ದೆಗಳ ನೇಮಕಾತಿಯ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಕಡಿಮೆ ಮಾಡುವ ಅಧಿಕಾರವು ನೇಮಕಾತಿ ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.

For More Job News Visit : www.kpscvaani.com

II. ವಯೋಮಿತಿ

ನೇಮಕಾತಿ ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕೆಳಕಂಡ ಕನಿಷ್ಟ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು.

ಮೀಸಲಾತಿ ವರ್ಗೀಕರಣ	ಕನಿಷ್ಟ ವಯೋಮಿತಿ	ಗರಿಷ್ಟ ವಯೋಮಿತಿ
ಸಾಮಾನ್ಯ ವರ್ಗ	18 ವರ್ಷ ತುಂಬಿರಬೇಕು	35 ವರ್ಷ ಮೀರಿರಬಾರದು
ಪ್ರವರ್ಗ2ಎ, ಪ್ರವರ್ಗ2ಬಿ, ಪ್ರವರ್ಗ3ಎ, ಪ್ರವರ್ಗ3ಬಿ	18 ವರ್ಷ ತುಂಬಿರಬೇಕು	38 ವರ್ಷ ಮೀರಿರಬಾರದು
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1	18 ವರ್ಷ ತುಂಬಿರಬೇಕು	40 ವರ್ಷ ಮೀರಿರಬಾರದು

1. ವಯೋಮಿತಿ ರಿಯಾಯಿತಿ ಕೋರಬಯಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ಪ್ರವರ್ಗ2ಎ, ಪ್ರವರ್ಗ2ಬಿ, ಪ್ರವರ್ಗ3ಎ, ಪ್ರವರ್ಗ3ಬಿ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರದಜೆರಾಕ್ಸ್ ಪ್ರತಿಗೆ ಸ್ವಯಂ ದೃಢೀಕರಣ ಮಾಡಿ ಅರ್ಜಿಯೊಂದಿಗೆ ಲಗತ್ತಿಸುವುದು.

2. ಮಾಜಿ ಸೈನಿಕರಿಗೆ ಅವರು ಸೇನೆಯಲ್ಲಿ ಸಲ್ಲಿಸಿದ ಅವಧಿ ಅಥವಾ ಗರಿಷ್ಟ 10 ವರ್ಷಗಳು, ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. ಮಾಜಿ ಸೈನಿಕ ಅಂದರೆ ಕೇಂದ್ರ ಸಶಸ್ತ್ರ ದಳಗಳಾದ ಭೂದಳ, ನೌಕಾದಳ ಮತ್ತು ವಾಯುದಳಗಳಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ. ಸೇವೆ ಸಲ್ಲಿಸಿದ ಬಗ್ಗೆ ಸೇವಾ ಪ್ರಮಾಣ ಪತ್ರದಜೆರಾಕ್ಸ್ ಪ್ರತಿಗೆ ಸ್ವಯಂ ದೃಢೀಕರಣ ಮಾಡಿ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

3. ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. ಇದಕ್ಕೆ ಸಂಬಂಧಿಸಿದ ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರದಜೆರಾಕ್ಸ್ ಸ್ವಯಂ ದೃಢೀಕರಣ ಮಾಡಿ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

4. ವಿಧವೆಯರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಯು ತಾನು ವಿಧವೆ ಎಂದು ಹಾಗೂ ಮರು ಮದುವೆಯಾಗಿಲ್ಲವೆಂದು ಪ್ರಮಾಣ ಪತ್ರವನ್ನು ತಹಸೀಲ್ದಾರ್ ಅವರಿಂದ ಪಡೆದು ಸದರಿ ಪ್ರಮಾಣ ಪತ್ರದ ಜೆರಾಕ್ಸ್ ಸ್ವಯಂ ದೃಢೀಕರಣ ಮಾಡಿ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು ಮತ್ತು ಒಕ್ಕೂಟವು ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕು.

III. ಆಯ್ಕೆ ವಿಧಾನ:

ಸ್ವೀಕರಿಸಲಾದ ಅರ್ಜಿಗಳನ್ನು ನಿಗದಿ ಪಡಿಸಿದ ವಿದ್ಯಾರ್ಹತೆ ಹಾಗೂ ಅಗತ್ಯ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರವು ಸೂಚಿಸಿರುವ ಬಾಹ್ಯ ಮೂಲ ಸಂಸ್ಥೆಗಳಿಂದ ಕರ್ನಾಟಕ ಸಹಕಾರ ಸಂಘಗಳ ನಿಯಮ 1960, 18ಸಿ ರಂತೆ 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರಿ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಟ ವಿಷಯ ವಸ್ತುಗಳಿಗೆ 25ಅಂಕಗಳು ಒಳಗೊಂಡಿರುತ್ತವೆ ಕರ್ನಾಟಕ ಸಹಕಾರ ಸಂಘಗಳ ನಿಯಮ 1960, 18ಡಿ ರಂತೆ 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು ಮತ್ತು ಕಂಪ್ಯೂಟರ್ ಪರೀಕ್ಷೆ ಮತ್ತು ಶಾರ್ಟ್‌ಹ್ಯಾಂಡ್ ಅಥವ ಟೈಪಿಂಗ್ ಹಾಗೂ ಪ್ರಕರಣಕ್ಕೆ ತಕ್ಕಂತೆ 100 ಅಂಕಗಳಿರುವುದು ಉಪವಿಧಿಗಳ ನಿಯಮಾನುಸಾರ ಪರೀಕ್ಷೆಯನ್ನು ನಡೆಸಲಾಗುವುದು.

For More Job News Visit : www.kpscvaani.com

ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷಾ ಪ್ರವೇಶ ಪತ್ರವನ್ನು ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ಅಂಚೆ ಮೂಲಕ/ಇ-ಮೇಲ್ ಮೂಲಕ ಕಳುಹಿಸಲಾಗುವುದು. ಒಕ್ಕೂಟದ ವೆಬ್‌ಸೆಟ್ ನಲ್ಲಿ ಲಿಖಿತ ಪರೀಕ್ಷೆಯ ಸ್ಥಳ ದಿನಾಂಕ ಮತ್ತು ಸಮಯವನ್ನು ಪ್ರಕಟಿಸಲಾಗುವುದು. ಸದರಿ ಮಾಹಿತಿಯನ್ನು ಒಕ್ಕೂಟದ ವೆಬ್‌ಸೆಟ್ ಮೂಲಕ ತಿಳಿದುಕೊಳ್ಳುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

ಲಿಖಿತ ಪರೀಕ್ಷೆಯಲ್ಲಿ (Written Examination) ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕಾಗಿ ಕರೆಯಲಾಗುವುದು. ಮೌಖಿಕ ಸಂದರ್ಶನಕ್ಕೆ ಗರಿಷ್ಟ 15 ಅಂಕಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮತ್ತು ಮೌಖಿಕ ಪರೀಕ್ಷೆಯಲ್ಲಿ ಗಳಿಸುವ ಅಂಕಗಳನ್ನು ಒಟ್ಟುಗೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಿ ಅರ್ಹತೆಯ ಆಧಾರದ ಮೇಲೆ ಅಯ್ಕೆ ಮಾಡಲಾಗುವುದು. ಅಭ್ಯರ್ಥಿಯ ಅರ್ಹತೆಯ ಬಗ್ಗೆ ಒಕ್ಕೂಟದ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

ಒಕ್ಕೂಟವು ತಿಳಿಸಿದ ಸ್ಥಳದಲ್ಲಿ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಕ್ಕೆ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.

IV. ಜಾತಿ ಪ್ರಮಾಣ ಪತ್ರಗಳು

ಅರ್ಜಿ ಶುಲ್ಕ ಮತ್ತು ವಯೊಮಿತಿಯಲ್ಲಿ ಮಿಸಲಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಕಡ್ಡಯವಾಗಿ ಲಗತ್ತಿಸತಕ್ಕದು.

ಜಾತಿಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದುಕೊಂಡಿರತಕ್ಕದ್ದು ಮತ್ತು ಚಾಲ್ತಿಯಲ್ಲಿರತಕ್ಕದ್ದು.

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು : ನಮೂನೆ □ಡಿ□
2. ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು : ನಮೂನೆ □ಇ□
3. ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು : ನಮೂನೆ □ಎಫ್□

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಶೀಲ್ದಾರ್ ಅವರಿಂದ ಪಡೆದುಕೊಂಡಿರತಕ್ಕದ್ದು.ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳಿಗೆ ಸ್ವಯಂ ದೃಢಿಕರಣ ಮಾಡಿ ಅರ್ಜಿಯೊಂದಿಗೆ ಲಗತ್ತಿಸುವುದು ಹಾಗೂ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ತಪ್ಪದೇ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ಪ್ರಮಾಣ ಪತ್ರಗಳ ನಮೂನೆಗಳನ್ನು ಈ ಪ್ರಕಟಣೆಯ ಕೊನೆಯಲ್ಲಿ ತೋರಿಸಲಾಗಿದೆ.ಈ ಮಾದರಿಯ ನಿಗದಿತ ನಮೂನೆಗಳನ್ನು ಹೊರತುಪಡಿಸಿ, ಇತರೇ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

V. ಶೈಕ್ಷಣಿಕ ವಿದ್ಯಾರ್ಹತೆ

ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿರುವ ಕನಿಷ್ಟ ವಿದ್ಯಾರ್ಹತೆಯನ್ನು ಆಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು.ಅಭ್ಯರ್ಥಿಗಳು ಅರ್ಜಿಯಲ್ಲಿ ಎಲ್ಲಾ ಸೆಮಿಸ್ಟರ್ / ವರ್ಷಗಳಲ್ಲಿ ನಿಗದಿಪಡಿಸಿರುವ ಗರಿಷ್ಟ ಮತ್ತು ಪಡೆದಿರುವ ಅಂಕಗಳನ್ನು ಕ್ರೋಢಿಕರಿಸಿ ಸರಾಸರಿ ಅಂಕಗಳನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಿಸಿರುವಂತೆ ನಮೂದಿಸುವುದು.

For More Job News Visit : www.kpscvaani.com

ROGCSU LTD., KOPPAL RAICHUR

ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡಾವಾರು ಅಂಕಗಳಿಗೆ ಪರಿವರ್ತಿಸಿ ಶೇಕಡಾವಾರು ಅಂಕಗಳನ್ನು ತಪ್ಪದೇ ನಮೂದಿಸಬೇಕು.ಪದವಿ/ ಸ್ನಾತಕೋತ್ತರ ಪದವಿ ಎಂದರೆ ಅಭ್ಯರ್ಥಿಯು 10+2 ರ ವಿದ್ಯಾಭ್ಯಾಸ ನಂತರ ಭಾರತದಲ್ಲಿಯ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ನಿಯತವಾಗಿ ತರಗತಿಗೆ ಹಾಜರಾಗಿ ಪಡೆದ ಸಾಂಪ್ರದಾಯಿಕ ಪದವಿ.ಮೂರು ವರ್ಷದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್/ ಐಟಿಐ ಎಂದರೆ ಅಭ್ಯರ್ಥಿಯು 10ನೇ ತರಗತಿ ನಂತರ ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜಿನಿಂದ ನಿಯತವಾಗಿ ತರಗತಿಗೆ ಹಾಜರಾಗಿ ಉತ್ತೀರ್ಣರಾಗಿರಬೇಕು.

VI. ಅರ್ಜಿ ಶುಲ್ಕ

01	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ	ಅರ್ಜಿ ಶುಲ್ಕ ರೂ. 500/– (ಬ್ಯಾಂಕ್ ಶುಲ್ಕ ಪ್ರತ್ಯೇಕ)
02	ಇತರೆ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ	ಅರ್ಜಿ ಶುಲ್ಕ ರೂ. 1,000/– (ಬ್ಯಾಂಕ್ ಶುಲ್ಕ ಪ್ರತ್ಯೇಕ)

- ನಿಗದಿ ಪಡಿಸಿದ ಶುಲ್ಕವನ್ನು ಅರ್ಜಿಯೊಂದಿಗೆ ಡಿಡಿ/ಪೇ ಆರ್ಡರ್‌ನ್ನು ರಾಯಚೂರುದಲ್ಲಿ ಸಂದಾಯವಾಗುವಂತೆ Managing Director, ROGCSU Ltd., Raichur ಇವರ ಹೆಸರಿನಲ್ಲಿ ಪಡೆದು ಲಗತ್ತಿಸಿರಬೇಕು.
- ನಿಗದಿ ಪಡಿಸಿದ ಶುಲ್ಕದ ಮೂಲ (Original) ಡಿಡಿ/ಪೇ–ಆರ್ಡರ್‌ನ್ನು ಅರ್ಜಿಯೊಂದಿಗೆ ಲಗತ್ತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಚಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
- ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಒಕ್ಕೂಟದ ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
- ನಿಗದಿತ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.04.2023 ಸಂಜೆ 5.30 ಗಂಟೆಯ ವರೆಗೆ.

VII. ಪ್ರಮುಖ ನಿಬಂಧನೆಗಳು

1. ಅಭ್ಯರ್ಥಿಗಳು ಅರ್ಜಿಯಲ್ಲಿ ಒದಗಿಸಿದ ಮಾಹಿತಿಗಳು ಮತ್ತು ಲಗತ್ತಿಸಿದ ದಾಖಲಾತಿಗಳ ಆಧಾರದ ಮೇಲೆ ಅವರುಗಳು ಪರೀಕ್ಷೆಗೆ ಅರ್ಹರೆ ಎಂಬುದನ್ನು ಒಕ್ಕೂಟವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ನೀಡುತ್ತದೆ. ಆದ್ದರಿಂದ ನಿಗದಿ ಪಡಿಸಿದ ವಯೋಮಿತಿ, ವಿದ್ಯಾರ್ಹತೆ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ತಪ್ಪು ಮಾಹಿತಿ / ಅಪೂರ್ಣ ಮಾಹಿತಿ ಸಲ್ಲಿಸುವ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಕ್ಕನ್ನು ಒಕ್ಕೂಟವು ಹೊಂದಿರುತ್ತದೆ.

For More Job News Visit : www.kpscvaani.com

2. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.

3. ಅಭ್ಯರ್ಥಿಗಳು ವಿದ್ಯಾರ್ಹತೆ, ಮೀಸಲಾತಿ, ಜನ್ಮ ದಿನಾಂಕಕ್ಕೆ ಸಂಬಂಧಿಸಿದ ದಾಖಲೆ ಮುಂತಾದ ಅವಶ್ಯಕ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳಿಗೆ ಸ್ವಯಂ ಧೃಢೀಕರಿಸಲ್ಪಟ್ಟ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸುವುದು ಕಡ್ಡಾಯವಾಗಿರುತ್ತದೆ. ಅಸ್ಪಷ್ಟ, ಅಪೂರ್ಣ, ಭಾವಚಿತ್ರ ಇಲ್ಲದ ಮತ್ತು ಅಭ್ಯರ್ಥಿ ಸಹಿ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

5. ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟಿರೆ ಆ ಮುಂದಿನ ಕೆಲಸದ ದಿನವು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗುವುದು.

VIII. ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ.

1. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ.,ರಾಯಚೂರು ಇದರಿಂದ ಯಾವುದೇ ಪಿಂಚಣಿ ಸೌಲಭ್ಯವಿರುವುದಿಲ್ಲ.

2. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಒಕ್ಕೂಟದ ಅನುಮೋದಿತ ಸೇವಾ ನಿಯಮಗಳು ಹಾಗೂ ವ್ಯಂದ ಮತ್ತು ನೇಮಕಾತಿ ನಿಯಮಗಳು ಅನ್ವಯಿಸುತ್ತವೆ.

3. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳು ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿದ ವೇತನ ಶ್ರೇಣಿಯಲ್ಲಿ ಸೇವಾ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.

4. ಆಯ್ಕೆಯಾಗುವ ಅಭ್ಯರ್ಥಿಗಳು ನಿಯೋಜಿಸಿದ ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರಬೇಕು.

5. ಒಕ್ಕೂಟದ ಹಿತದೃಷ್ಟಿಯಿಂದ ಒಕ್ಕೂಟದ ವ್ಯಾಪ್ತಿಯನ್ನು ಹೊರತು ಪಡಿಸಿದ ಯಾವುದೇ ಸ್ಥಳಗಳಿಗೂ ಸಹ ಕರ್ತವ್ಯಕ್ಕೆ ಅಭ್ಯರ್ಥಿಗಳನ್ನು ನಿಯೋಜಿಸಬಹುದಾದ ಹಕ್ಕನ್ನು ಒಕ್ಕೂಟವು ಹೊಂದಿರುತ್ತದೆ.

IX. ದುರ್ನಡತೆ:

ಒಬ್ಬ ವ್ಯಕ್ತಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಇಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ನೇಮಕಾತಿಯ ಪ್ರಕ್ರಿಯೆಯ ಸಂದರ್ಭದಲ್ಲಿ ಅಥವಾ ನೇಮಕಾತಿಯ ನಂತರವು ಖಾಯಂ ಆಗಿ ಡಿಬಾರ್ ಮಾಡಲಾಗುವುದು.

For More Job News Visit : www.kpscvaani.com

X. ನೇಮಕಾತಿಗೆ ಅನರ್ಹತೆಗಳು:

1. ಕಾನೂನುಬಾಹಿರ (Unlawful body) ನಿಕಾಯ ಸಂಸ್ಥೆಯೊಂದಿಗೆ ಅವನು/ಅವಳು ಸಂಪರ್ಕ ಹೊಂದಿದ್ದಲ್ಲಿ ಅಥವಾ ಸದಸ್ಯರಾಗಿದ್ದಲ್ಲಿ ಅಥವಾ ಅಂತಹ ಸಂಸ್ಥೆ/ನಿಕಾಯದ ಯಾವುದೇ ಚಟುವಟಿಕೆ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಲ್ಲಿ
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾಗಿದ್ದಲ್ಲಿ
3. ಹಿಂಸಾಕೃತ್ಯಗಳನ್ನು ಒಳಗೊಂಡಂತೆ ಕಾನೂನು ಪ್ರತಿರಕ್ಷಣೆಯ ಸಂಘಟಿತ ಉಲ್ಲಂಘನೆಯ ಗುರಿ ಹೊಂದಿದ್ದರೆ
4. ಭಾರತ ದೇಶದ ಸಾರ್ವಭೌಮತ್ವ ಅಥವಾ ಅಖಂಡತೆ ಅಥವಾ ರಾಜ್ಯದ ಭದ್ರತೆಯ ಹಿತಾಸಕ್ತಿಗೆ ಪ್ರತಿಕೂಲವನ್ನುಂಟು ಮಾಡುವ ಕಾರ್ಯದಲ್ಲಿ ತೊಡಗಿದ್ದಲ್ಲಿ
5. ವಿವಿಧ ವರ್ಗದ ಜನತೆಯ ನಡುವೆ ಧರ್ಮ, ಜನಾಂಗ, ಜಾತಿ, ಭಾಷೆ, ಕೋಮು ಆಧಾರದ ಮೇಲೆ ಶತೃತ್ವ ಅಥವಾ ದ್ವೇಷದ ಭಾವನೆಗಳಿಗೆ ಪ್ರಚೋದಿಸುವ ಕಾರ್ಯಗಳಲ್ಲಿ ತೊಡಗಿದ್ದಲ್ಲಿ
6. ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಶಾಸನಬದ್ಧ ನಿಗಮದ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸ್ವಾಮ್ಯತ್ವದ ಯಾವುದೇ ಸಾರ್ವಜನಿಕ ಉದ್ಯಮಗಳು ಅಥವಾ ವಾಣಿಜ್ಯ/ಸಹಕಾರಿ ಉದ್ಯಮಗಳ ಸೇವೆಗಳಿಂದ ವಜಾ ಮಾಡಲ್ಪಟ್ಟಿದ್ದಲ್ಲಿ
7. ಕೇಂದ್ರ ಅಥವಾ ಯಾವುದೇ ರಾಜ್ಯದ ಲೋಕಸೇವಾ ಆಯೋಗ ಅಥವಾ ಸ್ವಾಯತ್ತ/ನೇಮಕಾತಿ ಮಂಡಳಿಗಳಿಂದ ನಡೆಸುವ ಯಾವುದೇ ಆಯ್ಕೆ ಅಥವಾ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಖಾಯಂ ಆಗಿ ಬಹಿಷ್ಕೃತವಾದ ಅಥವಾ ಅನರ್ಹವಾಗಿದ್ದಲ್ಲಿ
8. ವೈದ್ಯಕೀಯವಾಗಿ ಅನರ್ಹರೆಂದು ಪರಿಗಣಿಸಲಾಗಿದ್ದಲ್ಲಿ
9. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ.
10. ಯಾವುದೇ ನ್ಯಾಯಾಲಯದಿಂದ ಶಿಕ್ಷೆಗೆಗೊಳಪಟ್ಟು ಜೈಲುವಾಸ ಅನುಭವಿಸಿದ್ದರೆ
11. ಯಾವುದೇ ನ್ಯಾಯಾಲಯದಿಂದ, ಸರ್ಕಾರಗಳಿಂದ ಅಥವಾ ಸಂಘ, ಸಂಸ್ಥೆಗಳಿಂದ ನೌಕರಿಗೆ ಅರ್ಹರಲ್ಲವೆಂದು ನಿರ್ದೇಶಿಸಿದ್ದರೆ.

XI. ಅಭ್ಯರ್ಥಿಯು ಕಡ್ಡಾಯವಾಗಿ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು/ದಾಖಲಾತಿಗಳು

1. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಸ್ವಯಂ ದೃಢೀಕರಣ ಮಾಡಿ ಅವರಿಂದ ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ / ಶಾಲೆ ವರ್ಗಾವಣೆ ಪತ್ರ /ಕ್ಯೂಮುಲೇಟಿವ್ ರೆಕಾರ್ಡ್‌ನ ಜೆರಾಕ್ಸ್ ಪ್ರತಿ.
2. ಹುದ್ದೆಗಳಿಗೆ ನಿಗದಿ ಪಡಿಸಲಾದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸ್ವಯಂ ದೃಢೀಕರಣ ಮಾಡಿ ಎಲ್ಲಾ ಸೆಮಿಸ್ಟರ್‌/ವರ್ಷಗಳ / ಗ್ರೇಡ್ ಅಂಕಪಟ್ಟಿಯ ಜೆರಾಕ್ಸ್ ಪ್ರತಿಗಳು.
3. ಅಭ್ಯರ್ಥಿಗಳು ಜಾತಿ / ಪ್ರವರ್ಗ ಮೀಸಲಾತಿಯನ್ನು ಕೋರಿದ್ದಲ್ಲಿ ಸರ್ಕಾರವು ಇತ್ತೀಚಿಗೆ ನಿಗದಿ ಪಡಿಸಿದ ನಮೂನೆಯಲ್ಲಿ ಪಡೆದ ಹಾಗೂ ಚಾಲ್ತಿಯಲ್ಲಿರುವ ಸ್ವಯಂ ದೃಢೀಕರಣ ಮಾಡಿ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ.
4. ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲೀಕೇಶನ್ಸ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಹಾಗೂ ಟ್ಯಾಲಿ ಕೋರ್ಸ್ ತೇರ್ಗಡೆ ಹೊಂದಿದ ಬಗ್ಗೆ ಸ್ವಯಂ ದೃಢೀಕರಣ ಮಾಡಿರುವ ಪ್ರಮಾಣ ಪತ್ರಗಳು.

For More Job News Visit : www.kpscvaani.com

5. ಪ್ರಸ್ತುತ ಸೇವೆಯಲ್ಲಿದ್ದರೆ ಅಭ್ಯರ್ಥಿಯು ಸಂಬಂಧಿಸಿದ ಉದ್ಯೋಗದಾತರಿಂದ ಇದರಲ್ಲಿ ಒದಗಿಸಿದ ನಮೂನೆಯಲ್ಲಿ ಪಡೆದ ನಿರಾಪೇಕ್ಷಣಾ / ಅನುಮತಿ ಪತ್ರದ (No Objection Certificate) ಮೂಲ ಪ್ರತಿ.

6. ಸೇವಾನುಭವ ಹೊಂದಿದ ಬಗ್ಗೆ ಸ್ವಯಂ ದೃಢೀಕರಣ ಮಾಡಿರುವ ಪ್ರಮಾಣ ಪತ್ರ.

7. ಅಭ್ಯರ್ಥಿಯು ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳು.

8. ಅರ್ಜಿ ಶುಲ್ಕಕ್ಕಾಗಿ ನಿಗದಿ ಪಡಿಸಿದ ಮೊತ್ತದ ಮೂಲ ಪೇ ಆರ್ಡರ್/ ಡಿ.ಡಿ.

9. ನೇಮಕಾತಿಗೆ ಸಂಬಂಧಿಸಿದಂತೆ ಅಗತ್ಯವಿರುವ ಇತರೇ ದಾಖಲಾತಿಗಳನ್ನು ತಪ್ಪದೇ ಲಗತ್ತಿಸುವುದು.

ಈ ನೇಮಕಾತಿ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00ರ ವರೆಗೆ ಫೋನ್ ಸಂಖ್ಯೆ: 08532–200938, ಮೊಬೈಲ್ ಸಂಖ್ಯೆ: 9591812141, 9591812146 ಇವುಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

For More Job News Visit : www.kpscvaani.com

(ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ–ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

ಪ್ರಮಾಣ ಪತ್ರ

_____ರಾಜ್ಯದ/ಕೇಂದ್ರಾಡಳಿತ ಪ್ರದೇಶದ _____ ಜಿಲ್ಲೆಯ/ವಿಭಾಗದ _____ಗ್ರಾಮ/ ಪಟ್ಟಣದ ನಿವಾಸಿಯಾದ ಶ್ರೀ/ಶ್ರೀಮತಿ _____ಎಂಬುವವರ ಮಗ /ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ _____ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ ಸೇರಿದವರಾಗಿರುತ್ತಾರೆಂದು ಪ್ರಮಾಣೀಕರಿಸಿದೆ

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ 1951

  (ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ 1966, ಹಿಮಾಚಲ್ ಪ್ರದೇಶ ರಾಜ್ಯ ರಚನಾ ಅಧಿನಿಯಮ, 1970 ಮತ್ತು ಈಶಾನ್ಯ ರಾಜ್ಯಗಳ ಪುನರ್ ರಚನಾ ಅಧಿನಿಯಮ, 1971 ರ ಮೂಲ ತಿದ್ದುಪಡಿಯಾದಂತೆ)

- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ 1956
- ಸಂವಿಧಾನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ 1978ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು) ಅನುಸೂಚಿತ ಬುಡಕಟ್ಟುಗಳ ಆದೇಶ 1959
- ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಉತ್ತರ ಪ್ರದೇಶ) ಆದೇಶ, 1967
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

ಶ್ರೀ/ಶ್ರೀಮತಿ/ಕುಮಾರಿ _____ ಮತ್ತು / ಅಥವಾ ಅವನ/ಅವಳ ಕುಟುಂಬವು _____ರಾಜ್ಯ/ಕೇಂದ್ರಾಡಳಿತ ಪ್ರದೇಶದ _____ ಜಿಲ್ಲಾ/ವಿಭಾಗದ _____ ಗ್ರಾಮ/ಪಟ್ಟಣದ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿರುತ್ತಾರೆ.

ಸ್ಥಳ
ದಿನಾಂಕ

ಸಹಿ
ತಹಶೀಲ್ದಾರ್ _____
ಪದನಾಮ
ಕಛೇರಿಯ ಮೊಹರಿನೊಂದಿಗೆ

ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ
ನಮೂನೆ-ಇ

(ನಿಯಮ 3ಎ (2) (3) ನೋಡಿ)
ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1ಕ್ಕೆ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ

ಪ್ರಮಾಣ ಪತ್ರ

_____ಗ್ರಾಮ/ಪಟ್ಟಣದ/ನಗರದ ನಿವಾಸಿಯಾದ ಶ್ರೀ/ಶ್ರೀಮತಿ _____ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ _____ ಇವರು ಹಿಂದುಳಿದ ವರ್ಗಗಳಿಗೆ (ಪ್ರವರ್ಗ) _____ಜಾತಿಯ _____ ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

ಸ್ಥಳ
ದಿನಾಂಕ

ಸಹಿ
ತಹಶೀಲ್ದಾರ್ _____
ಪದನಾಮ
ಕಛೇರಿಯ ಮೊಹರಿನೊಂದಿಗೆ

ಪ್ರವರ್ಗ-2, 2ಬಿ/ 3ಎ/, 3ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ

ನಮೂನೆ-ಎಫ್

(ನಿಯಮ 3ಎ (2) (3) ನೋಡಿ)

ಹಿಂದುಳಿದ ವರ್ಗಗಳಿಗೆ ಪ್ರವರ್ಗ-2, 2ಬಿ/ 3ಎ/, 3ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ

ಆದಾಯ

ಪ್ರಮಾಣ ಪತ್ರ

_____ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ _____ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ _____ ಇವರ ಮತ್ತು ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಸರ್ಕಾರಿ ಆದೇಶಗಳ ಸಂಖ್ಯೆ ಎಸ್.ಡಬ್ಲ್ಯೂ.ಡಿ. 225 ಬಿಸಿಎ 2000 ದಿನಾಂಕ 30/03/2002ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ತರದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು

ಅಭ್ಯರ್ಥಿಯಾಗಲಿ ಅಥವಾ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯಾಗಲಿ ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು

ಅಥವಾ

ಸಾರ್ವಜನಿಕರ ವಲಯ ಉದ್ಯಮದಲ್ಲಿ ತತ್ಸಮಾನ ಹುದ್ದೆಯನ್ನು ಹೊಂದಿರುವುದಿಲ್ಲ

ಅಥವಾ

ಖಾಸಗಿ ನಿಯೋಜಕರ ಕೆಳಗೆ 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000-11200) ಪ್ರಾರಂಭಿಕ ಹಂತ) ಕಡಿಮೆ ಇಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯ ಆದಾಯವು ಆರು ಲಕ್ಷ ಮೀರುವುದಿಲ್ಲವೆಂದು

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶಗಳ ಸಂಖ್ಯೆ: ಎಸ್.ಡಬ್ಲ್ಯೂ.ಡಿ.225 ಬಿಸಿಎ 2000 ದಿನಾಂಕ: 30.03.2002ರನ್ವಯ ಶ್ರೀ/ಶ್ರೀಮತಿ/ಕುಮಾರಿ _____ ಇವರು ____ ಜಾತಿಗೆ _____ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಡಿ 225 ಬಿಸಿಎ 2000 ದಿನಾಂಕ: 30.03.2000 ರನ್ವಯ ಹಿಂದುಳಿದ ವರ್ಗಗಳ ಪ್ರವರ್ಗ _____(2ಎ, 2ಬಿ, 3ಎ, 3ಬಿ)ಗೆ ಸೇರಿರುತ್ತಾರೆ.

ಸ್ಥಳ
ದಿನಾಂಕ

ಸಹಿ
ತಹಶೀಲ್ದಾರ್ _____
ಪದನಾಮ
ಕಛೇರಿಯ ಮೊಹರಿನೊಂದಿಗೆ

ಸೂಚನೆ:

1. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 148 ಬಿಸಿಎ 2015, ದಿನಾಂಕ: 04.06.2015ರಂತೆ ಹಿಂದುಳಿದ ವರ್ಗಗಳ ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆ ಕೆನೆಪದರಕ್ಕೆ ನಿಗದಿಪಡಿಸಿರುವ ಅಭ್ಯರ್ಥಿಯು ಮತ್ತು ಅವರ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Annual Income) ರೂ. 4.50 ಲಕ್ಷಗಳಿಂದ 6.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ ಮೀಸಲಾತಿ ಪ್ರಮಾಣಪತ್ರವನ್ನು ನೀಡುವ ಅಧಿಕೃತ ಅಧಿಕಾರಿಯು ದಿನಾಂಕ: 04/06/2015ರ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ನೀಡತಕ್ಕದ್ದು.

2. ಈ ಮೇಲೆ ಹೇಳಲಾದ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಸದರಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭರ್ಥಿಗಳು ಅದರಂತೆ ಜಾತಿ/ಮೀಸಲಾತಿ ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.

ಪ್ರಸ್ತುತದಲ್ಲಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕಾದ ನಿರಾಪೇಕ್ಷಣಾ / ಅನುಮತಿ ಪತ್ರದ ನಮೂನೆ

ಸಂಸ್ಥೆಯ ಲೆಟರ್ ಹೆಡ್‌ನಲ್ಲಿ

ಕ್ರ.ಸಂ: _____ ದಿನಾಂಕ: _____

ನಿರಾಪೇಕ್ಷಣಾ / ಅನುಮತಿ ಪತ್ರ

ಶ್ರೀ/ಶ್ರೀಮತಿ/ಕು _____ತಂದೆ _____ ಇವರು ದಿನಾಂಕ _____ರಿಂದ _____ವರೆಗೆ _____

_____ಸಂಸ್ಥೆಯಲ್ಲಿ ಖಾಯಂ ಉದ್ಯೋಗಿಯಾಗಿ _____ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರು ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ.,ರಾಯಚೂರು ಇವರು ದಿನಾಂಕ: 29ನೇ ಏಪ್ರೀಲ್, 2021ರ ನೇಮಕಾತಿ ಪ್ರಕಟಣೆ ಸಂಖ್ಯೆ: ಆರ್‌ಆರ್‌ಯು/ಆಡಳಿತ/ನೇಮಕಾತಿ/ /2021–22ರ ಮೂಲಕ ಅಹ್ವಾನಿಸಿರುವ _____ ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ / ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ನೇಮಕಾತಿ ಪ್ರಾಧಿಕಾರಿಗಳ ಪದನಾಮ
ಮೊಹರು ಮತ್ತು ಸಹಿ

ನಡತೆ ಪ್ರಮಾಣ ಪತ್ರ

ಶ್ರೀ _____ ಇವರ ಮಗನಾದ/ಮಗಳಾದ ಶ್ರೀ/ಶ್ರೀಮತಿ/ಕು _____ ಇವರನ್ನು ನಾನು ಕಳೆದ _____ ವರ್ಷ ____ ತಿಂಗಳುಗಳಿಂದ ಬಲ್ಲೆ ಮತ್ತು ನನಗೆ ತಿಳಿದ ಮಟ್ಟಿಗೆ ಹಾಗೂ ನಂಬುವಷ್ಟರ ಮಟ್ಟಿಗೆ ಇವರು ಒಳ್ಳೆಯ ನಡತೆಯುಳ್ಳವರಾಗಿದ್ದಾರೆ ಮತ್ತು ಸರ್ಕಾರಿ ಇತರೇ ಸಂಘ ಸಂಸ್ಥೆಗಳ ಉದ್ಯೋಗಕ್ಕೆ ಸೇರಲು ಅನರ್ಹಗೊಳಿಸುವಂತಹ ಯಾವ ಪೂರ್ವೋತ್ತರಗಳನ್ನು ಅವರು ಹೊಂದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಶ್ರೀ/ಶ್ರೀಮತಿ/ಕು _____ಇವರು ನನಗೆ ಸಂಬಂಧಿಕರಲ್ಲ.

ಸ್ಥಳ : ರುಜು:

ದಿನಾಂಕ: ಉದ್ಯೋಗ ನಾಮ

ಅರ್ಜಿ ನಮೂನೆ

ನೇಮಕಾತಿ ಪ್ರಕಟಣೆ ಸಂಖ್ಯೆ: ದಿನಾಂಕ	ಕ್ರ.ಸಂ: ಆರ್‌ಆರ್‌ಯು/ ಆಡಳಿತ/ ನೇಮಕಾತಿ/ 784/ 2022-23 ದಿನಾಂಕ: 18-03-2023.
ಹುದ್ದೆಯ ಹೆಸರು	

ಒಂದು
ಭಾವಚಿತ್ರ
ಅಂಟಿಸುವುದು

(ಇನ್ನೆರಡು ಭಾವಚಿತ್ರಗಳನ್ನು
ಅರ್ಜಿಯೊಂದಿಗೆ ಲಗತ್ತಿಸುವುದು)

ಸ್ವವಿವರ

01	ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ)			
02	ತಂದೆಯ / ಗಂಡನ ಹೆಸರು			
03	ತಾಯಿಯ ಹೆಸರು			
04	ಲಿಂಗ (ಅನ್ವಯಿಸುವುದನ್ನು ಗುರುತಿಸಿ)	ಪುರುಷ / ಮಹಿಳೆ		
05	ವೈವಾಹಿಕ ಪರಿಸ್ಥಿತಿ (ಅನ್ವಯಿಸುವುದನ್ನು ಗುರುತಿಸಿ)	ವಿವಾಹಿತ / ಅವಿವಾಹಿತ		
06	ರಾಷ್ಟ್ರೀಯತೆ			
07	ಜನ್ಮ ದಿನಾಂಕ	ದಿನಾಂಕ	ತಿಂಗಳು	ವರ್ಷ
	ಸ್ವಯಂ ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ / ಶಾಲೆ ವರ್ಗಾವಣೆ ಪತ್ರ /ಕ್ಯೂಮುಲೇಟಿವ್ ರೆಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು)			
08	ವಯಸ್ಸು (ಅರ್ಜಿ ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕಕ್ಕೆ ಇದ್ದಂತೆ)	ವರ್ಷ	ತಿಂಗಳು	ದಿನ
09	ವಿಳಾಸ			
	ಮನೆ ಸಂಖ್ಯೆ			
	ಗ್ರಾಮ			
	ಅಂಚೆ			
	ತಾಲ್ಲೂಕು			
	ಜಿಲ್ಲೆ			
	ಪಿನ್ ಕೋಡ್			
	ರಾಜ್ಯ			
	ಮೋಬೈಲ್ ಸಂಖ್ಯೆ			
	ಇಮೇಲ್ ಐಡಿ			

10	ವಿದ್ಯಾರ್ಹತೆ (ಹುದ್ದೆಗೆ ನಿಗದಿ ಪಡಿಸಿದ ವಿದ್ಯಾರ್ಹತೆ ಮಾತ್ರ ನಮೂದಿಸುವುದು) ಅಭ್ಯರ್ಥಿಯು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸ್ವಯಂ ದೃಢೀಕರಿಸಲ್ಪಟ್ಟ ಎಲ್ಲಾ ಸೆಮಿಸ್ಟರ್/ವರ್ಷಗಳ /ಗ್ರೇಡ್ ಅಂಕಪಟ್ಟಿಯ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. ಅಪೂರ್ಣ ಮಾಹಿತಿ/ಅಗತ್ಯ ಅಂಕಪಟ್ಟಿಗಳಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.					
ಕ್ರ.ಸ	ಕೋರ್ಸಿನ ಹೆಸರು	ಬೋರ್ಡ್/ವಿಶ್ವವಿದ್ಯಾನಿಲಯದ ಹೆಸರು	ತೇರ್ಗಡೆಯಾದ ವರ್ಷ	ಅಂಕಗಳ ವಿವರ		
				ಗರಿಷ್ಟ ಅಂಕಗಳು	ಪಡೆದ ಅಂಕಗಳು	ಶೇಕಡಾ
11	ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲೀಕೇಶನ್ಸ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣ ಪತ್ರಗಳು ಹಾಗೂ ಟ್ಯಾಲಿ ಕೋರ್ಸ್ ತೇರ್ಗಡೆ ಹೊಂದಿದ ಪ್ರಮಾಣ ಪತ್ರಗಳು. (ಸ್ವಯಂ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು)		ಲಗತ್ತಿಸಿದೆ / ಲಗತ್ತಿಸಿಲ್ಲ			

12	ಕನ್ನಡ ಬಾಷೆಯ ತಿಳುವಳಿಕೆ (ಅನ್ವಯಿಸುವುದನ್ನು ಗುರುತಿಸಿ)	
	ಓದಲು	ಬರುತ್ತದೆ / ಬರುವುದಿಲ್ಲ
	ಬರೆಯಲು	ಬರುತ್ತದೆ / ಬರುವುದಿಲ್ಲ
	ಮಾತನಾಡಲು	ಬರುತ್ತದೆ / ಬರುವುದಿಲ್ಲ

13 ಕೆಲಸದ ಅನುಭವ

(ಹುದ್ದೆಗೆ ನಿಗದಿ ಪಡಿಸಿದ ಅನುಭವ ಹೊಂದಿದ ಬಗ್ಗೆ ಅಭ್ಯರ್ಥಿಯು ಉದ್ಯೋಗದಾತರಿಂದ ನೀಡಲ್ಪಟ್ಟಪ್ರಮಾಣ ಪತ್ರದ ಜೆರಾಕ್ಸ ಪ್ರತಿಗೆ ಸ್ವಯಂ ದೃಢೀಕರಿಸಿದ ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು).

ಕ್ರ. ಸಂ	ಕಾರ್ಯನಿರ್ವಹಿಸಿದ ಸಂಸ್ಥೆಯ ಹೆಸರು	ಪದನಾಮ	ಅವಧಿ	
			ಇಂದ	ವರೆಗೆ

14 ಪ್ರಸ್ತುತ ಸೇವೆಯಲ್ಲಿದ್ದರೆ

(ಅಭ್ಯರ್ಥಿಯು ಸಂಬಂಧಿಸಿದ ಉದ್ಯೋಗದಾತರಿಂದ ಇದರಲ್ಲಿ ಒದಗಿಸಿದ ನಮೂನೆಯಲ್ಲಿ ಪಡೆದ ನಿರಾಪೇಕ್ಷಣಾ / ಅನುಮತಿ ಪತ್ರದ ಮೂಲ ಪ್ರತಿಯ ಪತ್ರದೊಂದಿಗೆ ಸಂಬಂಧಿಸಿದ ಸಂಸ್ಥೆಯ ಮೂಲಕ ಕ್ರಮ ಮಾರ್ಗವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು)

ಎ	ಸಂಸ್ಥೆಯ ಹೆಸರು	
ಬಿ	ಧಾರಣ ಮಾಡಿದ ಹುದ್ದೆ	
ಸಿ	ಸೇವಾ ವಿವರ	ದಿನಾಂಕ_____ದಿಂದ _____ ವರೆಗೆ
ಡಿ	ನಿರಾಪೇಕ್ಷಣಾ/ಅನುಮತಿ ಪತ್ರ	ಲಗತ್ತಿಸಿದೆ / ಲಗತ್ತಿಸಿರುವುದಿಲ್ಲ

15	ನಡತೆ ಪ್ರಮಾಣ ಪತ್ರ (ಅಭ್ಯರ್ಥಿಯು ಇದರಲ್ಲಿ ಒದಗಿಸಿದ ನಮೂನೆಯಲ್ಲಿ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು)	ಲಗತ್ತಿಸಿದೆ / ಲಗತ್ತಿಸಿರುವುದಿಲ್ಲ

16	ಲಗತ್ತಿಸಿದ ಮೂಲ ಪೇ ಆರ್ಡರ್ / ಡಿ.ಡಿ. ವಿವರಗಳು	ಪೇ ಆರ್ಡರ್ / ಡಿ.ಡಿ ಸಂಖ್ಯೆ	
		ದಿನಾಂಕ	
		ಮೊತ್ತ (ರೂ)	
		ಬ್ಯಾಂಕಿನ ಹೆಸರು	

ಘೋಷಣೆ

ಈ ಅರ್ಜಿಯಲ್ಲಿ ನೀಡಿದ ಎಲ್ಲಾ ಮಾಹಿತಿಗಳು ನಿಜವಾಗಿರುತ್ತವೆ ಮತ್ತು ಸರಿಯಾಗಿವೆ ಎಂದು ಈ ಮೂಲಕ ಧೃಢೀಕರಿಸುತ್ತೇನೆ ಮತ್ತು ಯಾವುದೇ ಮಾಹಿತಿ ಬಗ್ಗೆ ಯಾವುದೇ ವಾಸ್ತವ ಅಂಶಗಳನ್ನು ಮುಚ್ಚಿಡಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿದ್ದೇನೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ತಕ್ಷಣ ನಿರಾಕರಿಸಬಹುದು ಮತ್ತು ಸೇವೆಯಲ್ಲಿದ್ದಾಗ ಸೇವೆಯನ್ನು ಮುಕ್ತಾಯಗೊಳಿಸಬಹುದು.

ದಿನಾಂಕ: ಅಭ್ಯರ್ಥಿಯ ಸಹಿ

ಸ್ಥಳ : ಹೆಸರು